ವಿಷಯ:- **1995–96**ನೇ ಸಾಲಿನಲ್ಲಿ ಜವಳಿ ಇಲಾಖೆಗೆ ಬಜೆಟ್ಟಿನಲ್ಲಿ ಒದಗಿಸಿರುವ ಹಣ.

1079 (2030) ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995–96 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಜವಳಿ ಇಲಾಖೆಗೆ ಬಜೆಟ್ಟಿನಲ್ಲಿ ಒದಗಿಸಲಾದ ಹಣವೆಷ್ಟು?

ಆ) ಈ ಹಣದಲ್ಲಿ ಇಲಾಖೆ ಎಷ್ಟು ಹಣ ಬಳಸಿಕೊಂಡಿದೆ? ಎಷ್ಟು ಹಣ ಬಳಸದೇ ಉಳಿದಿದೆ?

ಇ) ಜವಳಿ ಇಲಾಖೆ ತನಗೆ ಒದಗಿಸಿದ ಪೂರ್ಣ ಹಣ ಬಳಸಿಕೊಳ್ಳದಿರಲು ಕಾರಣಗಳೇನು? ತೊಂದರೆಗಳೇನು?

ಈ) ಪ್ರಸಕ್ತ ಹಣಕಾಸು ವರ್ಷದಲ್ಲಿ ಜವಳಿ ಇಲಾಖೆಗೆ ಒದಗಿಸಿರುವ ಹಣವೆಷ್ಟು? ಎಷ್ಟು ಹಣ ಬಳಸಿಕೊಳ್ಳಲಾಗಿದೆ?

ಉ) ಈ ವರ್ಷ ಇಲಾಖೆಗೆ ಒದಗಿಸಿರುವ ಎಲ್ಲಾ ಹಣ ಬಳಸಿಕೊಳ್ಳಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಊ) 1996–97 ನೇ ವರ್ಷದಲ್ಲಿ ರಾಜ್ಯದಲ್ಲಿ ಎಷ್ಟು ಹೊಸ ಸಹಕಾರಿ ನೂಲಿನ ಗಿರಣಿಗಳು ಪ್ರಾರಂಭವಾಗಲು ಕ್ರಮ ಕೈಗೊಳ್ಳಲಾಗಿದೆ?

ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ)

	(ರೂ. ಲಕ್ಷಗಳಲ್ಲಿ)
ಯೋಜನಾ ವೆಚ್ಚ	ರೂ. 3209.00
ಪರಿಷ್ಕೃತ ಯೋಜನಾ ವೆಚ್ಚ	ರೂ. 2309.00
ಯೋಜನೇತರ ವೆಚ್ಚ	ರೂ. 1034.00

ಆ)

	(ರೂ. ಲಕ್ಷಗಳಲ್ಲಿ)	
	ಬಳಸಿಕೊಂಡ ಹಣ	ಉಳಿದ ಹಣ
ಯೋಜನೆ	2005.29	304.21
ಯೋಜನೇತರ	681.06	352.94

ಇ)

1) ಕೆಲವು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಲಿಲ್ಲ.

2) ಕೆಲವು ರಾಜ್ಯ ಸರ್ಕಾರದ ಹೊಸ ಯೋಜನೆಗಳಿಗೆ ಮಾಹಿತಿ ಬಾರದೇ ಇದ್ದ ಕಾರಣ ಮಾರ್ಗ ಸೂಚಿಗಳಿಗೆ ಅನುಮೋದನೆ ನೀಡಲಾಗಲಿಲ್ಲ.

3) ಕೆಲವು ಯೋಜನೆಗಳಿಗೆ ಕೇಂದ್ರ ಸರ್ಕಾರ ಆರ್ಥಿಕ ವರ್ಷದ ಅಂತ್ಯದಲ್ಲಿ ಹಣ ಬಿಡುಗಡೆ

ಮಾಡಿದ್ದು, 95–96ನೇ ಸಾಲಿನಲ್ಲಿಯೇ ವೆಚ್ಚ ಮಾಡಲು ಆಗಲಿಲ್ಲ. 1996–97ನೇ ಸಾಲಿನಲ್ಲಿ ವೆಚ್ಚ ಮಾಡಲಾಗುವುದು.

ಈ) (ರೂ. ಲಕ್ಷಗಳಲ್ಲಿ)

	ಒದಗಿಸಿದ ಮೊತ್ತ	ಬಳಸಿದ ಮೊತ್ತ
ಯೋಜನೆ	2719.00	233.96
ಯೋಜನೇತರ	791.16	9.80

ಉ) ಇಲಾಖೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಸಿಕ ಗುರಿಗಳನ್ನು ನಿಗದಿಪಡಿಸಿದ್ದು, ಎಲ್ಲಾ ಹಣವನ್ನು ಬಳಸಿಕೊಳ್ಳಲು ಯೋಜಿಸಲಾಗಿದೆ.

ಊ) ಸದ್ಯ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜ ಮಂದಿರಗಳ ನಿರ್ಮಾಣ

1082 (1942) **ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ):-** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೆ ಕಟ್ಟಲಾದ ಸಮಾಜ ಮಂದಿರಗಳಾವುವು? (ತಾಲ್ಲೂಕುವಾರು ವಿವರ ನೀಡುವುದು)

ಆ) ಅದಕ್ಕೆ ತಗಲಿದ ಅಂದಾಜು ವೆಚ್ಚವೆಷ್ಟು?

ಇ) ಬಹಳಷ್ಟು ಕಳಪೆ ಮಟ್ಟದಲ್ಲಿ ಸಮಾಜ ಮಂದಿರಗಳನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಕಳೆದ 3 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದೇ ಸಮಾಜ ಮಂದಿರಗಳನ್ನು ಕಟ್ಟಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.